# ಕರ್ನಾಟಕ ರಾಜ್ಯ ಉಗ್ರಾಣ ನಿಗಮ

ನಂ. 43, ಪ್ರಿಮ್‌ರೋಸ್ ರಸ್ತೆ, ಬೆಂಗಳೂರು

ಕಛೇರಿ ಮೊಬೈಲ್ ಸಂಖ್ಯೆ.7760966907/7760967050 ದೂರವಾಣಿ: 25571012/25571013

ಸಂಖ್ಯೆ: ಕರಾಉನಿ/ಆಡಳಿತ/ನೇರ ನೇಮಕಾತಿ/391 / 2016-17 ದಿನಾಂಕ: 29-04-2016

## ಅಧಿಸೂಚನೆ

1. ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ವೃಂದ ಮತ್ತು ನೇಮಕಾತಿ ನಿಯಮಾವಳಿಗಳು-2005 ಮತ್ತು ತಿದ್ದುಪಡಿ-2007 ರನ್ವಯ ಈ ಕೆಳಕಂಡ 'ಎ' 'ಬಿ' 'ಸಿ' ದರ್ಜೆಗಳ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ Online ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ.

| ಕ್ರ. ಸಂ. | ಹುದ್ದೆ | 2012ರ ಪರಿಷ್ಕೃತ ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ |
|---|---|---|---|---|
| ಗ್ರೂಪ್- 'ಎ' ಹುದ್ದೆಗಳು | | | | |
| 01. | ಉಪ ಪ್ರಧಾನ ವ್ಯವಸ್ಥಾಪಕರು / ಪ್ರಾದೇಶಿಕ ವ್ಯವಸ್ಥಾಪಕರು | ರೂ.30400-800-33600-900-39000-1050-45300-1200-51300 | 02 | Must possess a degree in B.Sc. (Agri.) / B.Sc. (Agri.) in Agricultural Marketing & Co-operation / M.Sc. / M.Com. / M.B.A. awarded by a University established by law in India. |
| 02. | ಉಪ ವ್ಯವಸ್ಥಾಪಕರು (ಫೀಲ್ಡ್) | ರೂ.28100-700-28800-800-33600-900-39000-1050-45300-1200-50100 | 03 | Must possess a degree in B.Sc. (Agri.) / B.Sc. (Agri.) in Agricultural Marketing & Co-operation / M.Sc. / M.Com. / M.B.A. awarded by a University established by law in India. |
| ಗ್ರೂಪ್- 'ಬಿ' ಹುದ್ದೆಗಳು | | | | |
| 03. | ಸಹಾಯಕ ವ್ಯವಸ್ಥಾಪಕರು (ಫೀಲ್ಡ್) | ರೂ.22800-600-24600-700-28800-800-33600-900-39000-1050-43200 | 08 | Must possess a degree in B.Sc. (Agri.)/ B.Sc.(Agri.) in Agricultural Marketing & Co-operation / M.Sc. / M.Com. / M.B.A. awarded by a University established by law in India. |
| 04. | ಉಗ್ರಾಣ ವ್ಯವಸ್ಥಾಪಕರು ದರ್ಜೆ-I | ರೂ.21600-600-24600-700-28800-800-33600-900-39000-1050-40050 | 10 | Must possess a degree in B.Sc. (Agri.)/ B.Sc.(Agri.) in Agricultural Marketing & Co-operation / M.Sc. / M.Com. /M.B.A. awarded by a University established by law in India |
| ಗ್ರೂಪ್- 'ಸಿ' ಹುದ್ದೆಗಳು | | | | |
| 05. | ಉಗ್ರಾಣ ವ್ಯವಸ್ಥಾಪಕರು ದರ್ಜೆ-II | ರೂ.20000-500-21000-600-24600-700-28800-800-33600-900-36300 | 14 | Must possess a degree in B.Sc. (Agri.)/ B.Sc.(Agri.) in Agricultural Marketing & Co-operation / M.Sc. / M.Com. /M.B.A. awarded by a University established by law in India |
| 06. | ಕಿರಿಯ ಅಭಿಯಂತರರು (ಸಿವಿಲ್) | ರೂ. 20000-500-21000-600-24600-700-28800-800-33600-900-36300 | 03 | Must possess a Diploma in Civil Engineering obtained from an institution recognized by Government. |

| | | | | |
|---|---|---|---|---|
| 07. | ಆಂತರಿಕ ಲೆಕ್ಕ ಪರಿಶೋಧಕರು / ಲೆಕ್ಕಿಗರು ಹಾಗೂ ಖಜಾಂಚಿ | ರೂ.17650-450-19000-500-21000-600-24600-700-28800-800-32000 | 02 | Must possess a Degree in Commerce or Degree in Business Management awarded by a University Established by law in India. |
| 08. | ತಾಂತ್ರಿಕ ಸಹಾಯಕರು | ರೂ.16000-400-17200-450- 19000-500-21000-600-24600-700-28800-800-29600 | 48 | Must possess a degree in B.Sc. (Agri.)/ B.Sc.(Agri.) in Agricultural Marketing & Co-operation awarded by a University Established by law in India. |
| 09. | ಹಿರಿಯ ಗುಮಾಸ್ತರು / ಸ್ವಾಗತಗಾರರು | ರೂ.14550-350-15600-400-17200-450-19000-500-21000-600-24600-700-26700 | **10** | Must possess a degree from University Established by law in India with basic course in computer from an institution recognized by Government. |
| 10. | ಲೆಕ್ಕಿಗರು | ರೂ.14550-350-15600-400-17200-450-19000-500-21000-600-24600-700-26700 | **11** | Must be holder of a Degree in Commerce with basic course in Computer obtained from an institution recognized by Government. |
| 11. | ಚಾಲಕರು | ರೂ.11600-200-12000-250-13000-300-14200-350-15600-400-17200-450-19000-500-21000 | **03** | Must have passed S.S.L.C and must be holder of a current valid Driving License to drive a light motor vehicle with Three years driving experience in an organization recognized by Government. |
| | | ಒಟ್ಟು | **114** | |

2. ನಿಗಮದ ವೆಬ್‌ಸೈಟ್‌ನಲ್ಲಿ ಸೂಚನೆಗಳನ್ನು ನಿಗದಿಪಡಿಸಲಾಗಿದೆ. ಅರ್ಜಿಗಳನ್ನು ಆನ್‌ಲೈನ್ ಮೂಲಕ ಸೂಚನೆಗಳ ಮೇರೆಗೆ ಭರ್ತಿಮಾಡಿ ಕೊನೆ ದಿನಾಂಕದೊಳಗೆ ಸಲ್ಲಿಸಬೇಕಾಗುತ್ತದೆ. ಅರ್ಜಿಯ ಶುಲ್ಕವನ್ನು ಅಂಚೆ ಕಛೇರಿಯಲ್ಲಿ ಪಾವತಿಸಬೇಕು. ನಿರ್ದಿಷ್ಟಪಡಿಸಿದ ಕೊನೆಯ ದಿನಾಂಕದ ನಂತರ ಅರ್ಜಿಯು ಆನ್‌ಲೈನ್‌ನಲ್ಲಿ ಸಿಗುವುದಿಲ್ಲ. ಒಂದು ವೇಳೆ ನಿಗಧಿಪಡಿಸಿದ ಕೊನೆಯ ದಿನಾಂಕದಂದು ಸಾರ್ವತ್ರಿಕ ರಜೆಯೆಂದು ಘೋಷಿಸಿದಲ್ಲಿ ಮರು ಕೆಲಸದ ದಿನವನ್ನು ಕೊನೆಯ ದಿನಾಂಕವೆಂದು ತಿಳಿಯುವುದು.

**ON LINEನಲ್ಲಿ**

* ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 05-05-2016 ಬೆಳಗ್ಗೆ 10.30ರಿಂದ
* ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 04-06-2016 (**ಸಂಜೆ 5.30**ಗಂಟೆಯೊಳಗೆ)
* ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 06-06-2016 (ಅಂಚೆ ಕಛೇರಿಯ ಕಾರ್ಯದ ವೇಳೆಯೊಳಗೆ).

3. **ಪಾವತಿಸಬೇಕಾದ ಶುಲ್ಕ**

| | |
|---|---|
| ಸಾಮಾನ್ಯ ವರ್ಗ / ಪ್ರವರ್ಗ 2(ಎ) / 2 (ಬಿ) / 3 (ಎ) / 3 (ಬಿ) ಗೆ ಸೇರಿದ ಅಭ್ಯರ್ಥಿಗಳಿಗೆ | **ರೂ.500/-** |
| ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ /ಪ್ರವರ್ಗ-1 / ಮಾಜಿ ಸೈನಿಕ ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ | **ರೂ.250/-** |

**ಸೂಚನೆ:**

**ಅರ್ಜಿಗಳನ್ನು ON LINE ಮೂಲಕ ಭರ್ತಿ ಮಾಡಿ ನಿಗದಿತ ಶುಲ್ಕವನ್ನು ಅಂಚೆ ಕಛೇರಿಯ ಕೆಲಸದ ವೇಳೆಯೊಳಗೆ ಕರ್ನಾಟಕದ ಯಾವುದೇ ಎಲೆಕ್ಟ್ರಾನಿಕ್ ಅಂಚೆ ಕಛೇರಿಗಳಲ್ಲಿ (e-Payment Post Offices Only) ಪಾವತಿ ಮಾಡಬಹುದು. ಇದನ್ನು ಹೊರತುಪಡಿಸಿ ಡಿ.ಡಿ., ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ. ಶುಲ್ಕ ಪಾವತಿಸದ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**

4. **ಅರ್ಹತಾ ಷರತ್ತುಗಳು:**

ಅ) ಭಾರತೀಯ ನಾಗರೀಕನಾಗಿರತಕ್ಕದ್ದು.

ಆ) ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗಿರುವುದಿಲ್ಲ.

ಇ) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತರಾಗಿಬೇಕು.

ಈ) ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ಉಗ್ರಾಣ ನಿಗಮವು ಕಾಯ್ದಿರಿಸಿಕೊಂಡಿದೆ ಮತ್ತು ನಿಗಮದ ವಿವೇಚನೆಯು ಯಾವುದೇ ವಿಧದಲ್ಲೂ ಈ ನಿಯಮಗಳ ಮೂಲಕ ಸೀಮಿತವಾಗಿರುವುದಿಲ್ಲ.

ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

5. **ವಿದ್ಯಾರ್ಹತೆ**

ಭಾರತದಲ್ಲಿ ಕಾನೂನು ರೀತಿಯಲ್ಲಿ ಸ್ಥಾಪಿಸಲ್ಪಟ್ಟ ಅಂಗೀಕೃತ ವಿಶ್ವವಿದ್ಯಾಲಯದಿಂದ ಕ್ರಮ ಸಂಖ್ಯೆ 1 ರಲ್ಲಿ ಹುದ್ದೆಗಳ ಮುಂದೆ ಸೂಚಿಸಿರುವ ವಿದ್ಯಾರ್ಹತೆಯನ್ನು ಹೊಂದಿರಬೇಕು.

**ಕ್ರಮ ಸಂಖ್ಯೆ 01 ರಿಂದ 05 ರವರೆಗಿನ ಹುದ್ದೆಯ ವಿದ್ಯಾರ್ಹತೆಯು ಒಂದೇ ರೀತಿ ಇರುವುದರಿಂದ, ಅಭ್ಯರ್ಥಿಯು ಒಂದೇ ಅರ್ಜಿ ನಮೂನೆಯಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿಯಲ್ಲಿ ಆದ್ಯತೆ ಮೇರೆಗೆ (Order of Preference) ಹುದ್ದೆಗಳನ್ನು ನಮೂದಿಸಬೇಕಾಗುತ್ತದೆ. ಯಾವುದೇ ಕಾರಣಕ್ಕೂ ಅರ್ಜಿ ಸಲ್ಲಿಸಿದ ನಂತರ ಆದ್ಯತೆ ಬದಲಾಯಿಸಲು ಅವಕಾಶಗಳಿರುವುದಿಲ್ಲ. ಪ್ರತಿ ಹುದ್ದೆಗೂ ಪ್ರತ್ಯೇಕವಾಗಿ ಅರ್ಜಿ ಶುಲ್ಕವನ್ನು ಸಲ್ಲಿಸಬೇಕಾಗುತ್ತದೆ.**

**ಉಳಿದ ಹುದ್ದೆಗಳಿಗೆ ಒಬ್ಬ ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಹಾಕಲು ಇಚ್ಛಿಸಿದಲ್ಲಿ ಪ್ರತ್ಯೇಕ ಅರ್ಜಿಯನ್ನು ಪ್ರತ್ಯೇಕ ಅರ್ಜಿ ಶುಲ್ಕದೊಂದಿಗೆ ಸಲ್ಲಿಸಬೇಕು.**

ಎಸ್. ಎಸ್. ಎಲ್. ಸಿ. ಅಥವಾ ಇದಕ್ಕೆ ತತ್ಸಮಾನವೆಂದು ರಾಜ್ಯ ಸರ್ಕಾರದಿಂದ ಘೋಷಿಸಲ್ಪಟ್ಟ ಇತರೆ ಯಾವುದೇ ಪರೀಕ್ಷೆಯಲ್ಲಿ ಅಥವಾ ಎಸ್. ಎಸ್. ಎಲ್. ಸಿ. ಪರೀಕ್ಷೆಗಿಂತ ಮೇಲ್ಪಟ್ಟ ಯಾವುದೇ ಪರೀಕ್ಷೆಯಲ್ಲಿ ಕನ್ನಡವನ್ನು ಮುಖ್ಯ ಭಾಷೆಯನ್ನಾಗಿ ಅಥವಾ ದ್ವಿತೀಯ ಭಾಷೆಯನ್ನಾಗಿ ಅಥವಾ ಐಚ್ಛಿಕ ವಿಷಯವನ್ನಾಗಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ತೇರ್ಗಡೆಯಾಗಿರುವ ಸಂದರ್ಭದಲ್ಲಿ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ಪಡೆಯಲು ಅರ್ಜಿಯ ನಿಗದಿತ ಸ್ಥಳದಲ್ಲಿ ವಿವರಗಳನ್ನು ನೀಡತಕ್ಕದ್ದು. ಸರಿಯಾದ ಮಾಹಿತಿ ಒದಗಿಸದಿದ್ದಲ್ಲಿ ಮೇಲಿನ ವಿನಾಯಿತಿಗಳನ್ನು ಪಡೆಯಲು ಅರ್ಹತೆ ನೀಡುವುದಿಲ್ಲ.

**ವಿ.ಸೂ:- ಎಸ್.ಎಸ್.ಎಲ್.ಸಿ.ಯಲ್ಲಿ ಕನ್ನಡ ಭಾಷೆಯನ್ನು ತೃತೀಯ ಭಾಷೆಯನ್ನಾಗಿ ಅಭ್ಯಸಿಸಿರುವ ಅಭ್ಯರ್ಥಿಗಳು ಕನ್ನಡ ಪರೀಕ್ಷೆಯನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕಾಗುತ್ತದೆ.**

ಕ್ರಮಸಂಖ್ಯೆ 01 ರಿಂದ 10ರ ವರೆಗಿನ ಹುದ್ದೆಗಳನ್ನು ಭರ್ತಿ ಮಾಡಲು ಸ್ಪರ್ಧಾತ್ಮಕ ಪರೀಕ್ಷೆ ಮಾಡಲಾಗುವುದು. ಆದರೆ ಕ್ರಮಸಂಖ್ಯೆ 11ರ ಚಾಲಕ (ಡ್ರೈವರ್) ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯ ಶೇಕಡವಾರು ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ಸ್ಪರ್ಧಾತ್ಮಕ ಪರೀಕ್ಷೆ / ಕನ್ನಡ ಭಾಷಾ ಪರೀಕ್ಷೆಗಳನ್ನು ಬೆಂಗಳೂರು, ಮೈಸೂರು, ಕಲಬುರುಗಿ ಮತ್ತು ಧಾರವಾಡ ನಗರಗಳಲ್ಲಿ ಮಾತ್ರ ನಡೆಸಲಾಗುವುದು. ಈ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಅಭ್ಯರ್ಥಿಗಳಿಗೆ ಯಾವುದೇ ಪ್ರಯಾಣ ಭತ್ಯೆ ಮತ್ತು ಇತರೆ ಭತ್ಯೆಗಳನ್ನು ನೀಡಲಾಗುವುದಿಲ್ಲ.

**ಸ್ಪರ್ಧಾತ್ಮಕ ಪರೀಕ್ಷಾ ವಿಧಾನ:** ಸ್ಪರ್ಧಾತ್ಮಕ ಪರೀಕ್ಷೆಯು ಕೆಳಕಂಡ ವಿಷಯಗಳನ್ನೊಳಗೊಂಡಿದ್ದು ವಸ್ತುನಿಷ್ಠೆ : ಬಹು ಆಯ್ಕೆ (Objective : Multiple choice) ಮಾದರಿಯದಾಗಿರುತ್ತದೆ.

| ವಿವರಗಳು | |
|---|---|
| ಪರೀಕ್ಷಾ ಅವಧಿ | 2 ಗಂಟೆಗಳು |
| ಪರೀಕ್ಷಾ ವಿಧಾನ | 200 ವಸ್ತುನಿಷ್ಠ : ಬಹು ಆಯ್ಕೆ ಪ್ರಶ್ನೆಗಳು (Objective : Multiple choice Questions); ಒಂದು ಪ್ರಶ್ನೆಗೆ ಒಂದು ಅಂಕದಂತೆ. |
| ಪರೀಕ್ಷಾ ವಿಷಯಗಳು | ಸಾಮಾನ್ಯ ಜ್ಞಾನ, ಸಾಮಾನ್ಯ ವಿಜ್ಞಾನಗಳು, ಪ್ರಚಲಿತ ವಿದ್ಯಮಾನಗಳು, ಕೃಷಿ ವಿಜ್ಞಾನಗಳ ಸಾಮಾನ್ಯ ಜ್ಞಾನ, ಉಗ್ರಾಣ ನಿರ್ವಹಣೆ ಮತ್ತು ತಂತ್ರಜ್ಞಾನಗಳು ಹಾಗೂ ಅಭ್ಯರ್ಥಿಗಳ ಜ್ಞಾನವನ್ನು ಆಯಾ ಹುದ್ದೆಗಳಿಗೆ ಸೂಚಿಸಿರುವ ವಿದ್ಯಾರ್ಹತೆಗೆ (Item 1, ಪುಟ 1ರಿಂದ 2ರಲ್ಲಿ) ನಿರ್ದಿಷ್ಟಪಡಿಸಿರುವ ಎಲ್ಲಾ ಪಠ್ಯಕ್ರಮಕ್ಕೆ (Syllabi) ಅನುಗುಣವಾಗಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ ಮೌಲ್ಯಮಾಪನ ಮಾಡಲಾಗುವುದು. |

ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಕನ್ನಡ ಮತ್ತು ಆಂಗ್ಲ ಭಾಷೆಗಳೆರಡರಲ್ಲೂ ಇರುತ್ತವೆ. ಕನ್ನಡ ಭಾಷೆಯಲ್ಲಿರುವ ಪ್ರಶ್ನೆಗಳ ಭಾಷಾಂತರದಲ್ಲಿ ಏನಾದರೂ ಅಸ್ಪಷ್ಟತೆ ಇದ್ದಲ್ಲಿ ಅಭ್ಯರ್ಥಿಗಳು ಆಂಗ್ಲ ಭಾಷೆಯಲ್ಲಿರುವ ಪ್ರಶ್ನೆಗಳನ್ನು ನೋಡುವುದು.

**ಸೂಚನೆ: ಸ್ಪರ್ಧಾತ್ಮಕ ಪರೀಕ್ಷೆ ನಡೆಯುವ ದಿನಾಂಕ ಹಾಗೂ ಪರೀಕ್ಷಾ ಕೇಂದ್ರಗಳನ್ನು ಪರೀಕ್ಷಾ ಪ್ರವೇಶ ಪತ್ರದ ಮೂಲಕ ಅಭ್ಯರ್ಥಿಗಳಿಗೆ ನಿಗಮದ ವೆಬ್‌ಸೈಟ್‌ನಲ್ಲಿಯೂ ಪ್ರಕಟಿಸಲಾಗುವುದು.**

ಅಭ್ಯರ್ಥಿಗಳು ಪರೀಕ್ಷಾ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಂಡು ಸೂಚಿಸಿದ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ತೆಗೆದುಕೊಳ್ಳಬೇಕು. ಪ್ರವೇಶ ಪತ್ರವಿಲ್ಲದ ಅಭ್ಯರ್ಥಿಗಳು ಪರೀಕ್ಷೆಗೆ ಅರ್ಹರಾಗಿರುವುದಿಲ್ಲ.

ಕರ್ನಾಟಕ ರಾಜ್ಯ ಉಗ್ರಾಣ ವೃಂದ ಮತ್ತು ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಾವಳಿ 2005 ಮತ್ತು ತಿದ್ದುಪಡಿ 2007ರನ್ವಯ ಅಭ್ಯರ್ಥಿಗಳನ್ನು ನಿಗದಿಪಡಿಸಿದ ವಿದ್ಯಾರ್ಹತೆಯ ಶೇ.50 ಅಂಕ ಮತ್ತು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಶೇ.50 ಅಂಕಗಳ ಅನುಪಾತದಲ್ಲಿ ಆಯ್ಕೆ ಮಾಡಲಾಗುವುದು.

6. **ಶೈಕ್ಷಣಿಕ ವಿದ್ಯಾರ್ಹತೆ ಮತ್ತು ವಯೋಮಿತಿ:**

**6.1 ಶೈಕ್ಷಣಿಕ ವಿದ್ಯಾರ್ಹತೆ:** ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅನುಸೂಚಿಯಲ್ಲಿ ಹುದ್ದೆಯ ಮುಂದೆ ಸೂಚಿಸಿರುವ ಕನಿಷ್ಠ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಲೇಬೇಕು.

**6.2 ವಯೋಮಿತಿ:** ಅನುಸೂಚಿಯಲ್ಲಿ ಸೂಚಿಸಿದಂತೆ, ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಕರ್ನಾಟಕ ನಾಗರೀಕ ಸೇವಾ ನಿಯಮದಲ್ಲಿ (ನೇಮಕಾತಿ ಮತ್ತು ಆಯ್ಕೆ) ನಿಗದಿಪಡಿಸಿದ ಕನಿಷ್ಠ ವಯೋಮಿತಿಯನ್ನು ಹೊಂದಿರಬೇಕು ಹಾಗೂ 2008ರಲ್ಲಿ ತಿದ್ದುಪಡಿ ಪಡಿಸಿದ ನಿಗದಿತ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

| | |
|---|---|
| **ಸಾಮಾನ್ಯ ಅರ್ಹತೆ** | **35 ವರ್ಷ** |
| **ಪ್ರವರ್ಗ–2ಎ, 2ಬಿ, 3ಎ, 3ಬಿ** | **38 ವರ್ಷ** |
| **ಪ.ಜಾ/ಪ.ಪಂ./ಪ್ರ–1** | **40 ವರ್ಷ** |

**ಈ ಕೆಗಿನ ಸಂದರ್ಭಗಳಲ್ಲಿ ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ಹೆಚ್ಚಿಸಲಾಗುವುದು.**

(ಅ) ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ ಅವನು ಕೇಂದ್ರ ಸಶಸ್ತ್ರದಳದಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಅಷ್ಟು ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳು.

(ಆ) ಅಭ್ಯರ್ಥಿಗಳು ನ್ಯಾಷನಲ್ ಕ್ಯಾಡೆಟ್‌ಕೋರ್‌ನಲ್ಲಿ ಪೂರ್ಣಕಾಲಿಕ ಪರಿವೀಕ್ಷಕರಾಗಿ ಸೇವೆ ಸಲ್ಲಿಸಿ ಬಿಡುಗಡೆಯಾಗಿರುವ ವ್ಯಕ್ತಿಯಾಗಿದ್ದರೆ ಅಂಥ ಕ್ಯಾಡೆಟ್ ಪರಿವೀಕ್ಷಕನಾಗಿ ಅವನು ಸೇವೆ ಸಲ್ಲಿಸಿದಷ್ಟು ವರ್ಷಗಳು.

(ಇ) ಅಭ್ಯರ್ಥಿಯು ಅಂಗವಿಕಲನಾಗಿದ್ದರೆ 10 ವರ್ಷಗಳು.

(ಈ) ಅಭ್ಯರ್ಥಿಯು ವಿಧವೆಯಾಗಿದ್ದಲ್ಲಿ 10 ವರ್ಷಗಳು.

(ಉ) ಅಭ್ಯರ್ಥಿಯು ಜೀತ ಕಾರ್ಮಿಕನಾಗಿದ್ದ ಪಕ್ಷದಲ್ಲಿ 10 ವರ್ಷಗಳು.

(ಊ) ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಅಥವಾ ಸ್ಥಳೀಯ ಪ್ರಾಧಿಕಾರದಲ್ಲಿ ಅಥವಾ ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಯಾದ ಅಥವಾ ರಾಜ್ಯ ಅಧಿನಿಯಮದ ಮೂಲಕ ಸ್ಥಾಪನೆಗೊಂಡು ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮ್ಯ ಅಥವಾ ನಿಯಂತ್ರಣದಲ್ಲಿರುವ ನಿಗಮದಲ್ಲಿ ಹುದ್ದೆ ಹೊಂದಿರುವ ಅಥವಾ ಹಿಂದೆ ಹೊಂದಿದ ಅಭ್ಯರ್ಥಿಗಳಿಗೆ ಸೇವೆ ಸಲ್ಲಿಸಿರುವಷ್ಟು ವರ್ಷಗಳು ಅಥವಾ 10 ವರ್ಷಗಳ ಅವಧಿ ಅದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು.

ಉಪ ಕಂಡಿಕೆ 6.2 ರ ಮೇರೆಗೆ ವಯೋಮಿತಿಯ ಸಡಿಲಿಕೆಯನ್ನು ಕೋರುವ ಅಭ್ಯರ್ಥಿಯು ವಿಧವೆಯಾಗಿದ್ದಲ್ಲಿ ತಾವು ವಿಧವೆಯಾಗಿದ್ದು ಮರು ಮದುವೆಯಾಗಿರುವುದಿಲ್ಲ ಎಂಬ ಸಕ್ಷಮ ಪ್ರಾಧಿಕಾರದಿಂದ ಪ್ರಮಾಣ ಪತ್ರ ಪಡೆದು ಸಲ್ಲಿಸಬೇಕು ಹಾಗೂ ಜೀತ ಕಾರ್ಮಿಕನಾಗಿದ್ದಲ್ಲಿ 1957ರ ಕರ್ನಾಟಕ ಜೀತ ಕಾರ್ಮಿಕ ಪದ್ಧತಿ (ರದ್ದಿಯಾತಿ) ಆದೇಶದ ಮೇರೆಗೆ ಜೀತ ಸಾಲವನ್ನು ಸಂದಾಯ ಮಾಡುವ ಹೊಣೆಯಿಂದ ಬಿಡುಗಡೆಯಾಗಿದ್ದಾನೆಂದು ಪ್ರಮಾಣ ಪತ್ರವನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್‌ರಿಂದ ಪಡೆದು ಸಲ್ಲಿಸಬೇಕು.

**7. ಜಾತಿ / ಮೀಸಲಾತಿ ಪ್ರಮಾಣ ಪತ್ರಗಳು:**

ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು:

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ನಮೂನೆ 'ಡಿ' ರಲ್ಲಿ

ಆ) ಪ್ರವರ್ಗ -1 ಕ್ಕೆ ಸೇರಿದ ಅಭ್ಯರ್ಥಿಗಳು ನಮೂನೆ 'ಇ' ರಲ್ಲಿ

ಇ) ಪ್ರವರ್ಗ-2 (ಎ), 2(ಬಿ), 3(ಎ) ಮತ್ತು 3(ಬಿ) ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ನಮೂನೆ 'ಎಫ್' ರಲ್ಲಿ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರವನ್ನು ಸಂಬಂಧಿತ ತಹಸೀಲ್ದಾರ್‌ರವರಿಂದ ಪಡೆದಿಟ್ಟುಕೊಂಡಿರತಕ್ಕದ್ದು. ನಿಗಮವು ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಸೂಚಿಸಿದಾಗ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ ಅವರ ಅಭ್ಯರ್ಥಿತನವನ್ನು ನಿಯಮಾನುಸಾರ ಸಾಮಾನ್ಯ ಅರ್ಹತೆಯಡಿಯಲ್ಲಿ ಪರಿಗಣಿಸಲಾಗುವುದು. ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಗಳಲ್ಲಿ ಸಲ್ಲಿಸಲ್ಪಡುವ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು. ಮೀಸಲಾತಿ ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ಅರ್ಜಿಯ ಸಂಬಂಧಪಟ್ಟ ಅಂಕಣದಲ್ಲಿ ನಮೂದಿಸತಕ್ಕದ್ದು.

**8. ಗ್ರಾಮೀಣ ಅಭ್ಯರ್ಥಿ:**

ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 08 ಸೆನೆನಿ 2001 ದಿನಾಂಕ 13-02-2001 ರನ್ವಯ ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ 1 ರಿಂದ 10 ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು.

- ಗ್ರಾಮೀಣ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಕೋರುವ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ನಮೂನೆ-2ನ್ನು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜುವಿನೊಂದಿಗೆ ಹಾಗೂ ಈ ಪ್ರಮಾಣ ಪತ್ರವಲ್ಲದೇ ಮೇಲುಸ್ಥರಕ್ಕೆ ಸೇರಿಲ್ಲದಿರುವ ಬಗ್ಗೆ ನಮೂನೆ-1 ರಲ್ಲಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಂಬಂಧಿತ ತಹಸೀಲ್ದಾರ್‌ರವರಿಂದ ಪಡೆದಿಟ್ಟುಕೊಂಡಿರತಕ್ಕದ್ದು.
- ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, 2ಬಿ, 3ಎ, 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿಯ ಪ್ರಮಾಣ ಪತ್ರವನ್ನು ನಮೂನೆ-2 ರಲ್ಲಿ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲುರುಜು ಪಡೆದಿಟ್ಟುಕೊಂಡಿರತಕ್ಕದ್ದು.
- **ನಿಗಮವು ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಸೂಚಿಸಿದಾಗ ತಪ್ಪದೇ ಹಾಜರುಪಡಿಸತಕ್ಕದ್ದು.** ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಗ್ರಾಮೀಣ ಮೀಸಲಾತಿಯನ್ನು ರದ್ದುಪಡಿಸಲಾಗುವುದು. (ಇತರೆ

ನಮೂನೆಗಳನ್ನು ಸಲ್ಲಿಸಲ್ಪಡುವ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು ಹಾಗೂ ಅಂತಹವರು ಗ್ರಾಮೀಣ ಮೀಸಲಾತಿಗೆ ಅನರ್ಹರಾಗುತ್ತಾರೆ).

9. **ವಿಶೇಷಚೇತನ (ಅಂಗವಿಕಲ) ಅಭ್ಯರ್ಥಿ :**

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 50 ಎಸ್‌ಆರ್‌ಆರ್ 2000 ದಿನಾಂಕ:03-09-2005 ರಲ್ಲಿ ರಾಜ್ಯ ಸಿವಿಲ್ ಸೇವೆಗಳ ಸಮೂಹ 'ಸಿ' ಗುಂಪಿನ ಹುದ್ದೆಗಳಿಗೆ ಶೇಕಡ 5 ರಷ್ಟು (ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಆರ್ 52 ಎಸ್‌ಆರ್‌ಆರ್ 99 ದಿನಾಂಕ:29-11-2002ರ ಅನುಸೂಚಿಯಡಿ ಸೇರ್ಪಡಿಸಲಾಗಿರುವ ಇಲಾಖೆಗಳು) ಹುದ್ದೆಗಳನ್ನು ವಿಶೇಷಚೇತನರಿಗೆ ಮೀಸಲಾತಿ ಕಲ್ಪಿಸಿದ್ದು, ಇದರನ್ವಯ ಶೇಕಡ 40ಕ್ಕಿಂತ ಕಡಿಮೆ ಇಲ್ಲದಂತಹ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಮಾತ್ರ ಈ ಮೀಸಲಾತಿಯನ್ನು ಕೋರಲು ಅರ್ಹರು. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 115 ಸೇನೆನಿ 2005 ದಿನಾಂಕ: 19-11-2005 ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆ ಬಗ್ಗೆ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಪಡೆದಿಟ್ಟುಕೊಂಡಿರತಕ್ಕದ್ದು. ನಿಗಮವು ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲನೆಗೆ ಸೂಚಿಸಿದಾಗ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ವಿಶೇಷಚೇತನ (ಅಂಗವಿಕಲ) ಮೀಸಲಾತಿಯನ್ನು ರದ್ದುಪಡಿಸಲಾಗುವುದು. ಇತರೆ ಯಾವುದೇ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಪಡೆಯಲಾಗಿರುವ ಪ್ರಮಾಣ ಪತ್ರಗಳನ್ನು ಪರಿಗಣಿಸಲು ಬರುವುದಿಲ್ಲ. ಮೀಸಲಾತಿ ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ಅರ್ಜಿಯ ಸಂಬಂಧಪಟ್ಟ ಅಂಕಣದಲ್ಲಿ ನಮೂದಿಸತಕ್ಕದ್ದು.

ದಿನಾಂಕ. 01-08-2009 ರ ಸರ್ಕಾರಿ ಆದೇಶ ಸಂಖ್ಯೆ. ಸಿಆಸುಇ 128 ಸೇನೆನಿ 2006 ರ ಮೇರೆಗೆ ರಾಜ್ಯ ಸಿವಿಲ್ ಸೇವೆಗಳಲ್ಲಿನ ಸಮೂಹ 'ಸಿ' ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಶೇ.5ರ ಮೀಸಲಾತಿಯಲ್ಲಿ ಮೇಲೆ ಗುರುತಿಸಿದ ಹುದ್ದೆಗಳನ್ನು ದೃಷ್ಟಿಮಾಂಧ್ಯವುಳ್ಳ ಅಭ್ಯರ್ಥಿಗಳಿಂದ ತುಂಬಲಾಗುವುದು.

10. **ಕನ್ನಡ ಮಾಧ್ಯಮ ಅಭ್ಯರ್ಥಿ:**

ಸರ್ಕಾರಿ ಅಧಿಸೂಚನೆ ಸಂಖ್ಯೆ ಸಿಆಸುಇ 71 ಸೇನೆನಿ ದಿನಾಂಕ 24-10-2002ರನ್ವಯ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಹಕ್ಕು ಪಡೆಯುವ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಹಾಗೂ ಮೊಹರಿನೊಂದಿಗೆ ಪಡೆದಿಟ್ಟುಕೊಂಡಿರತಕ್ಕದ್ದು. ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ಅರ್ಜಿಯ ಸಂಬಂಧಪಟ್ಟ ಅಂಕಣದಲ್ಲಿ ನಮೂದಿಸತಕ್ಕದ್ದು ಹಾಗೂ ನಿಗಮವು ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲನೆಗೆ ಸೂಚಿಸಿದಾಗ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಕನ್ನಡ ಮೀಸಲಾತಿಯನ್ನು ರದ್ದುಪಡಿಸಲಾಗುವುದು.

11. **ಮಾಜಿ ಸೈನಿಕ ಅಭ್ಯರ್ಥಿ:**

ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 13 ಎಸ್‌ಆರ್‌ಆರ್ 92 ದಿನಾಂಕ 01-04-1992 ಮತ್ತು ಅಧಿಸೂಚನೆ ಸಂಖ್ಯೆ ಡಿಪಿಎಆರ್ 28 ಎಸ್‌ಆರ್‌ಆರ್ 95 ದಿನಾಂಕ 21-10-1995 ರನ್ವಯ ನೇರ ನೇಮಕಾತಿಗಳಲ್ಲಿ ಶೇಕಡ 10 ರಷ್ಟು ಹುದ್ದೆಗಳನ್ನು ಮಾಜಿ ಸೈನಿಕರಿಗೆ ಮೀಸಲಾತಿ ಕಲ್ಪಿಸಲಾಗಿದೆ. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರಲ್ಲಿದ್ದಂತೆ ಮಾಜಿ ಸೈನಿಕರ ವಿವರಣೆ ಕೆಳಕಂಡಂತಿದೆ:

(1) ಮಾಜಿ ಸೈನಿಕ ಎಂದರೆ ಕೇಂದ್ರ ಸಶಸ್ತ್ರ ದಳಗಳಾದ ನಿಯಮಿತ ಭೂದಳ, ನೌಕಾದಳ ಮತ್ತು ವಾಯು ದಳದಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಯೋಧನಲ್ಲದ) ಸೇವೆ ಸಲ್ಲಿಸಿದ ವ್ಯಕ್ತಿ ಆದರೆ ಡಿಫೆನ್ಸ್ ಸೆಕ್ಯೂರಿಟಿ ಕೋರ್, ಜನರಲ್ ರಿಸರ್ವ್ ಇಂಜಿನಿಯರಿಂಗ್ ಫೋರ್ಸ್, ಲೋಕ ಸಹಾಯಕ ಸೇವೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಸೇರ್ಪಡೆಯಾಗುವುದಿಲ್ಲ ಮತ್ತು

(2) ಕೇಂದ್ರ ಸಶಸ್ತ್ರ ದಳಗಳಲ್ಲಿ ಸೇವೆ ಸಲ್ಲಿಸುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು (ಸಂದರ್ಭಾನುಸಾರ ಹೆಂಡತಿ ಅಥವಾ ಗಂಡ ಮತ್ತು ಮಕ್ಕಳು ಮತ್ತು ಮಲ ಮಕ್ಕಳು) ಮಾಜಿ ಸೈನಿಕ ಮೀಸಲಾತಿಗೆ ಅರ್ಹರಾಗಿರುತ್ತಾರೆ. ಆದರೆ ಅಂತಹವರುಗಳಿಗೆ ವಯೋಮಿತಿ ಸಡಿಲಿಕೆಯನ್ನು ನೀಡಲಾಗುವುದಿಲ್ಲ.

ಅ) ಅಂತಹ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ

ಅಥವಾ

ಆ) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಯಿಂದ ಬಿಡುಗಡೆಯಾದ ಅಥವಾ ವ್ಯಕ್ತಿಯ ಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಅಂತಹ ಸೇವೆಯಿಂದ ಬಿಡುಗಡೆಯಾದವನು

ಅಥವಾ

ಇ) ಸ್ವಂತ ಕೋರಿಕೆ ಹೊರತುಪಡಿಸಿ ಸಿಬ್ಬಂದಿ ಕಡಿತದ ಪರಿಣಾಮದಿಂದ ಅಂತಹ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ.

ಅಥವಾ

ಈ) ತನ್ನ ಸ್ವಂತ ಕೋರಿಕೆ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದುಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ದಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆಯುತ್ತಿರುವ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ವರ್ಗದ ಸಿಬ್ಬಂದಿಯವರು:–

i) ನಿರಂತರ ಸೇವೆ ಸಲ್ಲಿಸಿದ ನಿವೃತ್ತಿ ಹೊಂದಿದ ಪಿಂಚಣಿದಾರರು.

ii) ಮಿಲಿಟರಿ ಸೇವೆಯಿಂದಾಗಿ ಉಂಟಾದ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ವ್ಯಕ್ತಿ.

iii) ಗ್ಯಾಲಂಟ್ರಿ ಪ್ರಶಸ್ತಿ ವಿಜೇತರು.

**ವಿವರಣೆ:**– ಕೇಂದ್ರ ಸಶಸ್ತ್ರ ದಳದಲ್ಲಿ ಸೇವೆಯಲ್ಲಿರುವ ವ್ಯಕ್ತಿಗಳು ಸೇವೆಯಿಂದ ನಿವೃತ್ತಿ ಹೊಂದಿದ ನಂತರ ಮಾಜಿ ಸೈನಿಕರ ವರ್ಗದಡಿ ಬರುವ ವ್ಯಕ್ತಿಗೆ ನಿರ್ದಿಷ್ಟ ಒಪ್ಪಂದವು ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಪುನರ್ ಉದ್ಯೋಗಕ್ಕೆ ಅರ್ಜಿ ಹಾಕಿಕೊಳ್ಳಲು ಹಾಗೂ ಅವರಿಗೆ ಮಾಜಿ ಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅನುಮತಿ ನೀಡಲಾಗಿದೆ. ಆದರೆ ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವವರೆಗೆ ರಾಜ್ಯ ನಾಗರೀಕ ಸೇವೆ ಅಥವಾ ಹುದ್ದೆಗೆ ನೇಮಕ ಹೊಂದುವಂತಿಲ್ಲ. ಇಂತಹವರು ಅರ್ಜಿ ಸಲ್ಲಿಸುವ ಮುನ್ನ ಸೇನೆಯಿಂದ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸಬೇಕು. ಸೇನೆಯಿಂದ ಬಿಡುಗಡೆಯಾದ ವ್ಯಕ್ತಿಗಳು ಅವರ ಬಿಡುಗಡೆ ಪ್ರಮಾಣ ಪತ್ರವನ್ನು /ಮಾಜಿ ಸೈನಿಕರ ಅವಲಂಬಿತರು ಮಾಜಿ ಸೈನಿಕರು ಸೇವೆಯಲ್ಲಿದ್ದಾಗ ಕೊಲ್ಲಲ್ಪಟ್ಟಿರುವ / ಶಾಶ್ವತವಾಗಿ ಅಂಗವಿಕಲರಾದ ಬಗ್ಗೆ ಪ್ರಮಾಣ ಪತ್ರವನ್ನು ಮೂಲ ದಾಖಲಾತಿ ಪರಿಶೀಲನೆಗೆ ತಪ್ಪದೆ ಹಾಜರುಪಡಿಸಬೇಕು.

**12. ಯೋಜನೆಗಳಿಂದ ನಿರಾಶ್ರಿತ ಅಭ್ಯರ್ಥಿ (PDP)**

ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 23 ಸೆನೆನಿ 99 ದಿನಾಂಕ 23–11–2000 ರನ್ವಯ ಯೋಜನೆಗಳಿಂದ ನಿರ್ವಸಿತರಾದ (ಆದರೆ ಈ ನಿಯಮಗಳು ಜಾರಿಯಾಗುವ 20 ವರ್ಷಕ್ಕೆ ಮುನ್ನ ನಿರ್ವಸಿತರಾದ ಕುಟುಂಬ ಅಭ್ಯರ್ಥಿಗಳಿಗೆ ಈ ಮೀಸಲಾತಿ ಅನ್ವಯವಾಗುವುದಿಲ್ಲ) ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಸಂಬಂಧಿತ ತಹಶೀಲ್ದಾರ್‌ರವರಿಂದ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು.

**13. ಹೈದರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿ:**

ಸರ್ಕಾರಿ ಆದೇಶ ಸಂಖ್ಯೆ DPAR 06 PLX 2012 ದಿನಾಂಕ: 20.01.2014 ಹಾಗೂ ಸಂಖ್ಯೆ: DPAR 43 MKC 2013 ದಿನಾಂಕ:29.01.2014 ರನ್ವಯ ಹೈದರಾಬಾದ್ ಕರ್ನಾಟಕ ಮೀಸಲಾತಿ ಕೋರುವ ಅಭ್ಯರ್ಥಿಗಳು ನೇರ ನೇಮಕಾತಿಯಲ್ಲಿ ಸ್ಥಳೀಯ ವ್ಯಕ್ತಿಯೆಂಬ ಮೀಸಲಾತಿಯನ್ನು ಕೋರುವ ಅನುಬಂಧ–ಎ ಯಲ್ಲಿರುವ ನಮೂನೆಯಲ್ಲಿಯೇ ಅರ್ಹತಾ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರವಾದ ಸಂಬಂಧಪಟ್ಟ ಉಪ ವಿಭಾಗದ ಸಹಾಯಕ ಆಯುಕ್ತರಿಂದ ಪಡೆದಿಟ್ಟುಕೊಳ್ಳತಕ್ಕದ್ದು. ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ಸೂಚಿಸಿದಾಗ ತಪ್ಪದೆ ಹಾಜರುಪಡಿಸತಕ್ಕದ್ದು.

**14. ಪ್ರಮುಖವಾದ ಸೂಚನೆಗಳು:**

ಅರ್ಜಿಯಲ್ಲಿ ನಮೂದಿಸಲಾದ ಎಲ್ಲಾ ದಾಖಲಾತಿಗಳ ಮೂಲ ದಾಖಲಾತಿಗಳನ್ನು ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಮೊದಲು ಹೊಂದಿರತಕ್ಕದ್ದು. ಮೀಸಲಾತಿ ಪ್ರಮಾಣ ಪತ್ರದ ಹಾಗೂ ಇತರೆ ಪ್ರಮಾಣ ಪತ್ರಗಳ

ಮೂಲ ಪ್ರತಿಗಳನ್ನು ದಾಖಲಾತಿಗಳ ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸಬೇಕು. ಇತರೆ ನಮೂನೆಗಳಲ್ಲಿ ಅಥವಾ ಅರ್ಜಿ ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಪಡೆದ ಯಾವುದೇ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. ತಪ್ಪಿದ್ದಲ್ಲಿ ಇವರ ಮೀಸಲಾತಿಯನ್ನು/ ಅಭ್ಯರ್ಥಿತ್ವವನ್ನು ರದ್ದಗೊಳಿಸಲಾಗುವುದು. ಈ ನೇಮಕಾತಿಗೆ ಸಂಬಂಧಪಟ್ಟ ಯಾವುದೇ ಕಾನೂನು ವ್ಯಾಜ್ಯಗಳನ್ನು ಬೆಂಗಳೂರಿನ ವ್ಯಾಪ್ತಿಯೊಳಗೆ ಮಾತ್ರ ಪರಿಹರಿಸಿಕೊಳ್ಳತಕ್ಕದ್ದು.

**ಅರ್ಜಿದಾರರು ಈ ಕೆಳಕಂಡ ದಾಖಲೆಗಳ ದೃಢೀಕೃತ ಛಾಯಾಪ್ರತಿಗಳನ್ನು, ಮೂಲ ದಾಖಲೆಗಳನ್ನು ಪರಿಶೀಲನೆ ಮಾಡುವಾಗ ಹಾಜರುಪಡಿಸಬೇಕು**

i. ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಅಂಕಪಟ್ಟಿಗಳು ಹಾಗೂ ಗ್ರೇಡ್‌ನ್ನು ಶೇಕಡವಾರು ಅಂಕಗಳಿಗೆ ಪರಿವರ್ತಿಸಿದ ಪ್ರಮಾಣ ಪತ್ರ.

ii. ಕನ್ನಡ ಭಾಷೆಯಲ್ಲಿ ತೇರ್ಗಡೆಯಾಗಿರುವ ದಾಖಲೆ.

iii. ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ / ವರ್ಗಾವಣೆ ಪ್ರಮಾಣ ಪತ್ರ / ಜನನ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ.

iv. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2(ಎ), ಪ್ರವರ್ಗ–2(ಬಿ), ಪ್ರವರ್ಗ–3(ಎ) ಮತ್ತು ಪ್ರವರ್ಗ–3(ಬಿ) ಮೀಸಲಾತಿ ಪ್ರಮಾಣ ಪತ್ರಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಗಳಲ್ಲಿ (ಮೀಸಲಾತಿ ಕೋರಿದ್ದಲ್ಲಿ).

v. ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ–1 ಮತ್ತು 2ರಲ್ಲಿ (ಮೀಸಲಾತಿ ಕೋರಿದ್ದಲ್ಲಿ).

vi. ಅಂಗವಿಕಲ ಮೀಸಲಾತಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ).

vii. ಕನ್ನಡ ಮಾಧ್ಯಮ ಅಭ್ಯರ್ಥಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ).

viii. ಮಾಜಿ ಸೈನಿಕ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ).

ix. ಯೋಜನೆಗಳಿಂದ ನಿರಾಶ್ರಿತ ಅಭ್ಯರ್ಥಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ).

x. ಹೈದರಾಬಾದ್ – ಕರ್ನಾಟಕ ಅಭ್ಯರ್ಥಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ).

xi. ಸರ್ಕಾರಿ ನೌಕರರಾಗಿದ್ದಲ್ಲಿ ನಿರಾಪೇಕ್ಷಣಾ ಪತ್ರ (NOC) ಸಲ್ಲಿಸತಕ್ಕದ್ದು.

(ಮೇಲಿನ ಕ್ರಮ ಸಂಖ್ಯೆ iv, v, vi, vii, viii, ix ಮತ್ತು x ಮೀಸಲಾತಿ ಪ್ರಮಾಣ ಪತ್ರಗಳ ನಿಗದಿಪಡಿಸಿದ ನಮೂನೆಗಳಲ್ಲಿ ಮೀಸಲಾತಿಯನ್ನು ಕೋರದೆ ಇತರೆ ನಮೂನೆಗಳಲ್ಲಿ ಸಲ್ಲಿಸಿದಲ್ಲಿ ಮೀಸಲಾತಿಯನ್ನು ತಿರಸ್ಕರಿಸಲಾಗುವುದು.

**ಸಹಿ/-**
**ವ್ಯವಸ್ಥಾಪಕ ನಿರ್ದೇಶಕರು**

# ಅನುಸೂಚಿ

ಅಧಿಸೂಚನೆ ಸಂಖ್ಯೆ ಕರಾಉನಿ/ಆಡಳಿತ/ನೇರ ನೇಮಕಾತಿ/ 391/2016-17/ ದಿನಾಂಕ:29-04-2016

**ಭರ್ತಿ ಮಾಡಲಾದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05-05.2016 ರಿಂದ 04-06.2016 ಸಂಜೆ 5.30 ಗಂಟೆಯೊಳಗೆ**

| ಕ್ರ ಸಂ. | ಹುದ್ದೆಯ ಪದನಾಮ ಮತ್ತು ಸಂಖ್ಯೆ | ವೇತನ ಶ್ರೇಣಿ (2012ನೇ ಪರಿಷ್ಕೃತ) | ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ | ವಯೋಮಿತಿ (ವಯಸ್ಸು ವರ್ಷಗಳಲ್ಲಿ) |
|---|---|---|---|---|
| 1 | 2 | 3 | 4 | 5 |
| 01. | ಉಪ ಪ್ರಧಾನ ವ್ಯವಸ್ಥಾಪಕರು / ಪ್ರಾದೇಶಿಕ ವ್ಯವಸ್ಥಾಪಕರು **- 02** | ರೂ.30400–800–33600–900–39000–1050–45300–1200–51300 | Must possess a degree in B.Sc.(Agri.) / B.Sc. (Agri.) in Agricultural Marketing & Co-operation /M.Sc. / M.Com. / M.B.A. awarded by a University established by law in India. | ಕನಿಷ್ಠ–18<br>ಗರಿಷ್ಠ :–<br>ಸಾ.ಅ.–35<br><br>ಪ್ರ.2 (ಎ)<br>ಪ್ರ 2 (ಬಿ)<br>ಪ್ರ 3 (ಎ)<br>ಪ್ರ 3 (ಬಿ)–38<br><br>ಪ.ಜಾ<br>ಪ.ಪಂ<br>ಪ್ರ–1–40 |

**6 — ಮೀಸಲಾತಿ ವರ್ಗೀಕರಣ**

**ಗ್ರೂಪ್ 'ಎ' ಹುದ್ದೆಗಳು**

| ಮೀಸಲಾತಿ | ಇ. ರಾ ವ್ಯ. | ಇ. ಹೈ. ಕ. | ಮ.ಅ. ರಾ ವ್ಯ. | ಮ.ಅ. ಹೈ. ಕ. | ಗ್ರಾ. ಅ. ರಾ ವ್ಯ. | ಗ್ರಾ. ಅ. ಹೈ. ಕ. | ವಿ. ಚೇ. ರಾ ವ್ಯ. | ವಿ. ಚೇ. ಹೈ. ಕ. | ಮಾ. ಸೈ. ರಾ ವ್ಯ. | ಮಾ. ಸೈ. ಹೈ. ಕ. | ಕ.ಮಾ.ಅ. ರಾ ವ್ಯ. | ಕ.ಮಾ.ಅ. ಹೈ. ಕ. | ಯೋ.ಅ. ರಾ ವ್ಯ. | ಯೋ.ಅ. ಹೈ. ಕ. | ಒಟ್ಟು ರಾ ವ್ಯ. | ಒಟ್ಟು ಹೈ. ಕ. |
|---|---|---|---|---|---|---|---|---|---|---|---|---|---|---|---|---|
| ಪ.ಜಾ | 01 | – | – | – | – | – | – | – | – | – | – | – | – | – | 01 | – |
| ಪ.ಪಂ. | – | – | – | – | – | – | – | – | – | – | – | – | – | – | – | – |
| ಪ್ರ 1 | – | – | – | – | – | – | – | – | – | – | – | – | – | – | – | – |
| ಪ್ರ2(ಎ) | – | – | – | – | – | – | – | – | – | – | – | – | – | – | – | – |
| ಪ್ರ2(ಬಿ) | – | – | – | – | – | – | – | – | – | – | – | – | – | – | – | – |
| ಪ್ರ3(ಎ) | – | – | – | – | – | – | – | – | – | – | – | – | – | – | – | – |
| ಪ್ರ3(ಬಿ) | – | – | – | – | – | – | – | – | – | – | – | – | – | – | – | – |
| ಸಾ.ಅ. | 01 | – | – | – | – | – | – | – | – | – | – | – | – | – | 01 | – |
| ಒಟ್ಟು | 02 | – | – | – | – | – | – | – | – | – | – | – | – | – | 02 | – |
| **Grand Total** | | | | | | | | | | | | | | | **02** | |

| ಕ್ರ ಸಂ. | ಹುದ್ದೆಯ ಪದನಾಮ ಮತ್ತು ಸಂಖ್ಯೆ | ವೇತನ ಶ್ರೇಣಿ (2012ನೇ ಪರಿಷ್ಕೃತ) | ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ | ವಯೋಮಿತಿ (ವಯಸ್ಸು ವರ್ಷಗಳಲ್ಲಿ) | ಮೀಸಲಾತಿ ವರ್ಗೀಕರಣ |
|---|---|---|---|---|---|
| 1 | 2 | 3 | 4 | 5 | 6 |
| 02. | ಉಪ ವ್ಯವಸ್ಥಾಪಕರು (ಫೀಲ್ಡ್) **- 03** | ರೂ.28100–700–28800–800–33600–900–39000–1050–45300–1200–50100 | Must possess a degree in B.Sc.(Agri.) / B.Sc. Agri.)in Agricultural Marketing & Co-operation / M.Sc. / M.Com. / M.B.A. awarded by a University established by law in India. | ಕನಿಷ್ಠ–18<br>ಗರಿಷ್ಠ :–<br>ಸಾ.ಅ.–35<br><br>ಪ್ರ.2 (ಎ)<br>ಪ್ರ 2 (ಬಿ)<br>ಪ್ರ 3 (ಎ)<br>ಪ್ರ 3 (ಬಿ)-38<br><br>ಪ.ಜಾ<br>ಪ.ಪಂ<br>ಪ್ರ–1-40 | See reservation table below |

| ಮೀಸಲಾತಿ | ಇ. ರಾ ವೃ. | ಇ. ಹೈ. ಕ. | ಮ.ಅ. ರಾ ವೃ. | ಮ.ಅ. ಹೈ. ಕ. | ಗ್ರಾ. ಅ. ರಾ ವೃ. | ಗ್ರಾ. ಅ. ಹೈ. ಕ. | ವಿ. ಚೇ. ರಾ ವೃ. | ವಿ. ಚೇ. ಹೈ. ಕ. | ಮಾ. ಸೈ. ರಾ ವೃ. | ಮಾ. ಸೈ. ಹೈ. ಕ. | ಕ.ಮಾ.ಅ. ರಾ ವೃ. | ಕ.ಮಾ.ಅ. ಹೈ. ಕ. | ಯೋ.ಅ. ರಾ ವೃ. | ಯೋ.ಅ. ಹೈ. ಕ. | ಒಟ್ಟು ರಾ ವೃ. | ಒಟ್ಟು ಹೈ. ಕ. |
|---|---|---|---|---|---|---|---|---|---|---|---|---|---|---|---|---|
| ಪ.ಜಾ | 01 | 01 | – | – | – | – | – | – | – | – | – | – | – | – | 01 | 01 |
| ಪ.ಪಂ. | – | – | – | – | – | – | – | – | – | – | – | – | – | – | – | – |
| ಪ್ರ 1 | – | – | – | – | – | – | – | – | – | – | – | – | – | – | – | – |
| ಪ್ರ 2(ಎ) | – | – | – | – | – | – | – | – | – | – | – | – | – | – | – | – |
| ಪ್ರ 2(ಬಿ) | – | – | – | – | – | – | – | – | – | – | – | – | – | – | – | – |
| ಪ್ರ 3(ಎ) | – | – | – | – | – | – | – | – | – | – | – | – | – | – | – | – |
| ಪ್ರ 3(ಬಿ) | – | – | – | – | – | – | – | – | – | – | – | – | – | – | – | – |
| ಸಾ. ಅ. | 01 | – | – | – | – | – | – | – | – | – | – | – | – | – | 01 | – |
| ಒಟ್ಟು | 02 | 01 | – | – | – | – | – | – | – | – | – | – | – | – | 02 | 01 |
| **Grand Total** | | | | | | | | | | | | | | | **03** | |

| ಕ್ರ. ಸಂ. | ಹುದ್ದೆಯ ಪದನಾಮ ಮತ್ತು ಸಂಖ್ಯೆ | ವೇತನ ಶ್ರೇಣಿ (2012ನೇ ಪರಿಷ್ಕೃತ) | ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ | ವಯೋಮಿತಿ (ವಯಸ್ಸು ವರ್ಷಗಳಲ್ಲಿ) | ಮೀಸಲಾತಿ ವರ್ಗೀಕರಣ |
|---|---|---|---|---|---|
| 1 | 2 | 3 | 4 | 5 | 6 |
| | | | | | ಗ್ರೂಪ್ 'ಬಿ' ಹುದ್ದೆಗಳು |
| 03. | ಸಹಾಯಕ ವ್ಯವಸ್ಥಾಪಕರು (ಫೀಲ್ಡ್) **- 08** | ರೂ.22800 –600– 24600– 700– 28800– 800– 33600– 900– 39000– 1050– 43200 | Must possess a degree in B.Sc.(Agri.) / B.Sc. (Agri.) in Agricultural Marketing & Co-operation / M.Sc. / M.Com. / M.B.A. awarded by a University established by law in India. | ಕನಿಷ್ಠ–18 ಗರಿಷ್ಠ :– ಸಾ.ಅ.–35 ಪ್ರ.2 (ಎ) ಪ್ರ 2 (ಬಿ) ಪ್ರ 3 (ಎ) ಪ್ರ 3 (ಬಿ) -38 ಪ.ಜಾ ಪ.ಪಂ ಪ್ರ–1-40 | (see table below) |

| ಮೀಸಲಾತಿ | ಇ. ರಾ ವೃ. | ಇ. ಹೈ. ಕ. | ಮ.ಅ. ರಾ ವೃ. | ಮ.ಅ. ಹೈ. ಕ. | ಗ್ರಾ. ಅ. ರಾ ವೃ. | ಗ್ರಾ. ಅ. ಹೈ. ಕ. | ವಿ. ಚೇ. ರಾ ವೃ. | ವಿ. ಚೇ. ಹೈ .ಕ. | ಮಾ. ಸೈ. ರಾ ವೃ. | ಮಾ. ಸೈ. ಹೈ. ಕ. | ಕ.ಮಾ.ಅ. ರಾ ವೃ. | ಕ.ಮಾ.ಅ. ಹೈ. ಕ. | ಯೋ.ಅ. ರಾ ವೃ. | ಯೋ.ಅ. ಹೈ .ಕ. | ಒಟ್ಟು ರಾ ವೃ. | ಒಟ್ಟು ಹೈ. ಕ. |
|---|---|---|---|---|---|---|---|---|---|---|---|---|---|---|---|---|
| ಪ.ಜಾ | 01 | 01 | – | – | – | – | – | – | – | – | – | – | – | – | 01 | 01 |
| ಪ.ಪಂ. | 01 | – | – | – | – | – | – | – | – | – | – | – | – | – | 01 | – |
| ಪ್ರ 1 | 01 | – | – | – | – | – | – | – | – | – | – | – | – | – | 01 | – |
| ಪ್ರ 2(ಎ) | 01 | – | – | – | – | – | – | – | – | – | – | – | – | – | 01 | – |
| ಪ್ರ 2(ಬಿ) | – | – | – | – | – | – | – | – | – | – | – | – | – | – | – | – |
| ಪ್ರ 3(ಎ) | – | – | – | – | – | – | – | – | – | – | – | – | – | – | – | – |
| ಪ್ರ 3(ಬಿ) | – | – | – | – | – | – | – | – | – | – | – | – | – | – | – | – |
| ಸಾ. ಅ. | 01 | – | 01 | – | 01 | – | – | – | – | – | – | – | – | – | 03 | – |
| ಒಟ್ಟು | 05 | 01 | 01 | – | 01 | – | – | – | – | – | – | – | – | – | 07 | 01 |
| **Grand Total** | | | | | | | | | | | | | | | **08** | |

| ಕ್ರ ಸಂ. | ಹುದ್ದೆಯ ಪದನಾಮ ಮತ್ತು ಸಂಖ್ಯೆ | ವೇತನ ಶ್ರೇಣಿ (2012ನೇ ಪರಿಷ್ಕೃತ) | ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ | ವಯೋಮಿತಿ (ವಯಸ್ಸು ವರ್ಷಗಳಲ್ಲಿ) |
|---|---|---|---|---|
| 1 | 2 | 3 | 4 | 5 |
| 04. | ಉಗ್ರಾಣ ವ್ಯವಸ್ಥಾಪಕರು ದರ್ಜೆ–I **- 10** | ರೂ.21600 –600– 24600– 700– 28800– 800– 33600– 900– 39000– 1050– 40050 | Must possess a degree in B.Sc.(Agri.) / B.Sc.(Agri.) in Agricultural Marketing & Co-operation / M.Sc. / M.Com. / M.B.A. awarded by a University established by law in India. | ಕನಿಷ್ಠ–18 ಗರಿಷ್ಠ :– ಸಾ.ಅ.–35 ಪ್ರ.2 (ಎ) ಪ್ರ 2 (ಬಿ) ಪ್ರ 3 (ಎ) ಪ್ರ 3 (ಬಿ) -38 ಪ.ಜಾ ಪ.ಪಂ ಪ್ರ–1 -40 |

6 ಮೀಸಲಾತಿ ವರ್ಗೀಕರಣ

| ಮೀಸಲಾತಿ | ಇ. | | ಮ.ಅ. | | ಗ್ರಾ. ಅ. | | ವಿ. ಚೇ. | | ಮಾ. ಸೈ. | | ಕ.ಮಾ.ಅ. | | ಯೋ.ಅ. | | ಒಟ್ಟು | |
|---|---|---|---|---|---|---|---|---|---|---|---|---|---|---|---|---|
| | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ.ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. |
| ಪ.ಜಾ | 01 | 01 | – | – | – | – | – | – | – | – | – | – | – | – | 01 | 01 |
| ಪ.ಪಂ. | 01 | – | – | – | – | – | – | – | – | – | – | – | – | – | 01 | – |
| ಪ್ರ 1 | 01 | – | – | – | – | – | – | – | – | – | – | – | – | – | 01 | – |
| ಪ್ರ 2(ಎ) | 01 | – | – | – | – | – | – | – | – | – | – | – | – | – | 01 | – |
| ಪ್ರ 2(ಬಿ) | – | – | – | – | – | – | – | – | – | – | – | – | – | – | – | – |
| ಪ್ರ 3(ಎ) | – | – | – | – | – | – | – | – | – | – | – | – | – | – | – | – |
| ಪ್ರ 3(ಬಿ) | – | – | – | – | – | – | – | – | – | – | – | – | – | – | – | – |
| ಸಾ. ಅ. | 01 | 01 | 01 | – | 01 | – | 01 | – | – | – | – | – | – | – | 04 | 01 |
| ಒಟ್ಟು | 05 | 02 | 01 | – | 01 | – | 01 | – | – | – | – | – | – | – | 08 | 02 |
| **Grand Total** | | | | | | | | | | | | | | | **10** | |

| ಕ್ರ ಸಂ. | ಹುದ್ದೆಯ ಪದನಾಮ ಮತ್ತು ಸಂಖ್ಯೆ | ವೇತನ ಶ್ರೇಣಿ (2012ನೇ ಪರಿಷ್ಕೃತ) | ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ | ವಯೋಮಿತಿ (ವಯಸ್ಸು ವರ್ಷಗಳಲ್ಲಿ) | ಮೀಸಲಾತಿ ವರ್ಗೀಕರಣ |
|---|---|---|---|---|---|
| 1 | 2 | 3 | 4 | 5 | 6 |
| | | | | | ಗ್ರೂಪ್ 'ಸಿ' ಹುದ್ದೆಗಳು |
| 05. | ಉಗ್ರಾಣ ವ್ಯವಸ್ಥಾಪಕರು ದರ್ಜೆ–II<br>**- 14** | ರೂ.20000 –500– 21000– 600– 24600– 700– 28800– 800– 33600– 900– 36300 | Must possess a degree in B.Sc.(Agri.) / B.Sc.(Agri.) in Agricultural Marketing & Co-operation / M.Sc. / M.Com. /M.B.A. awarded by a University established by law in India. | ಕನಿಷ್ಠ–18<br>ಗರಿಷ್ಠ :-<br>ಸಾ.ಅ.–35<br>ಪ್ರ.2 (ಎ)<br>ಪ್ರ 2 (ಬಿ)<br>ಪ್ರ 3 (ಎ)<br>ಪ್ರ 3 (ಬಿ)<br>-38<br>ಪ.ಜಾ<br>ಪ.ಪಂ<br>ಪ್ರ–1<br>-40 | See reservation table below |

| ಮೀಸಲಾತಿ | ಇ. | | ಮ.ಅ. | | ಗ್ರಾ. ಅ. | | ವಿ. ಚೇ. | | ಮಾ. ಸೈ. | | ಕ.ಮಾ.ಅ. | | ಯೋ.ಅ. | | ಒಟ್ಟು | |
|---|---|---|---|---|---|---|---|---|---|---|---|---|---|---|---|---|
| | ರಾ ವ್ಯ. | ಹೈ. ಕ. | ರಾ ವ್ಯ. | ಹೈ. ಕ. | ರಾ ವ್ಯ. | ಹೈ. ಕ. | ರಾ ವ್ಯ. | ಹೈ. ಕ. | ರಾ ವ್ಯ. | ಹೈ. ಕ. | ರಾ ವ್ಯ. | ಹೈ. ಕ. | ರಾ ವ್ಯ. | ಹೈ. ಕ. | ರಾ ವ್ಯ. | ಹೈ. ಕ. |
| ಪ.ಜಾ | 01 | 01 | 01 | – | – | – | – | – | – | – | – | – | – | – | 02 | 01 |
| ಪ.ಪಂ. | 01 | 01 | – | – | – | – | – | – | – | – | – | – | – | – | 01 | 01 |
| ಪ್ರ 1 | 01 | – | – | – | – | – | – | – | – | – | – | – | – | – | 01 | – |
| ಪ್ರ 2(ಎ) | 01 | – | – | – | – | – | – | – | – | – | – | – | – | – | 01 | – |
| ಪ್ರ 2(ಬಿ) | – | – | – | – | – | – | – | – | – | – | – | – | – | – | – | – |
| ಪ್ರ 3(ಎ) | – | – | – | – | – | – | – | – | – | – | – | – | – | – | – | – |
| ಪ್ರ 3(ಬಿ) | – | – | – | – | – | – | – | – | – | – | – | – | – | – | – | – |
| ಸಾ. ಅ. | 01 | 01 | 02 | 01 | 01 | – | 01 | – | – | – | – | – | – | – | 05 | 02 |
| ಒಟ್ಟು | 05 | 03 | 03 | 01 | 01 | – | 01 | – | – | – | – | – | – | – | 10 | 04 |
| **Grand Total** | | | | | | | | | | | | | | | **14** | |

| ಕ್ರ ಸಂ. | ಹುದ್ದೆಯ ಪದನಾಮ ಮತ್ತು ಸಂಖ್ಯೆ | ವೇತನ ಶ್ರೇಣಿ (2012ನೇ ಪರಿಷ್ಕೃತ) | ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ | ವಯೋಮಿತಿ (ವಯಸ್ಸು ವರ್ಷಗಳಲ್ಲಿ) | ಮೀಸಲಾತಿ ವರ್ಗೀಕರಣ |
|---|---|---|---|---|---|
| 1 | 2 | 3 | 4 | 5 | 6 |
| 06. | ಕಿರಿಯ ಅಭಿಯಂತರರು (ಸಿವಿಲ್) **- 03** | ರೂ. 20000–500–21000–600–24600–700–28800–800–33600–900–36300 | For the post of Junior Engineer (Civil), must possess a Diploma in Civil Engineering obtained from an institution recognized by Government. | ಕನಿಷ್ಠ–18<br>ಗರಿಷ್ಠ :–<br>ಸಾ.ಅ.–35<br>ಪ್ರ.2 (ಎ) ಪ್ರ 2 (ಬಿ) ಪ್ರ 3 (ಎ) ಪ್ರ 3 (ಬಿ) - 38<br>ಪ.ಜಾ ಪ.ಪಂ ಪ್ರ–I - 40 | (see table below) |

| ಮೀಸಲಾತಿ | ಇ. | | ಮ.ಅ. | | ಗ್ರಾ. ಅ. | | ವಿ. ಚೇ. | | ಮಾ. ಸೈ. | | ಕ.ಮಾ.ಅ. | | ಯೋ.ಅ. | | ಒಟ್ಟು | |
|---|---|---|---|---|---|---|---|---|---|---|---|---|---|---|---|---|
| | ರಾ ವ್ಯ. | ಹೈ. ಕ. | ರಾ ವ್ಯ. | ಹೈ. ಕ. | ರಾ ವ್ಯ. | ಹೈ. ಕ. | ರಾ ವ್ಯ. | ಹೈ. ಕ. | ರಾ ವ್ಯ. | ಹೈ. ಕ. | ರಾ ವ್ಯ. | ಹೈ. ಕ. | ರಾ ವ್ಯ. | ಹೈ. ಕ. | ರಾ ವ್ಯ. | ಹೈ. ಕ. |
| ಪ.ಜಾ | 01 | 01 | – | – | – | – | – | – | – | – | – | – | – | – | 01 | 01 |
| ಪ.ಪಂ. | – | – | – | – | – | – | – | – | – | – | – | – | – | – | – | – |
| ಪ್ರ 1 | – | – | – | – | – | – | – | – | – | – | – | – | – | – | – | – |
| ಪ್ರ 2(ಎ) | – | – | – | – | – | – | – | – | – | – | – | – | – | – | – | – |
| ಪ್ರ 2(ಬಿ) | – | – | – | – | – | – | – | – | – | – | – | – | – | – | – | – |
| ಪ್ರ 3(ಎ) | – | – | – | – | – | – | – | – | – | – | – | – | – | – | – | – |
| ಪ್ರ 3(ಬಿ) | – | – | – | – | – | – | – | – | – | – | – | – | – | – | – | – |
| ಸಾ. ಅ. | 01 | – | – | – | – | – | – | – | – | – | – | – | – | – | 01 | – |
| ಒಟ್ಟು | 02 | 01 | – | – | – | – | – | – | – | – | – | – | – | – | 02 | 01 |
| **Grand Total** | | | | | | | | | | | | | | | **03** | |

| ಕ್ರ ಸಂ. | ಹುದ್ದೆಯ ಪದನಾಮ ಮತ್ತು ಸಂಖ್ಯೆ | ವೇತನ ಶ್ರೇಣಿ (2012ನೇ ಪರಿಷ್ಕೃತ) | ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ | ವಯೋಮಿತಿ (ವಯಸ್ಸು ವರ್ಷಗಳಲ್ಲಿ) | ಮೀಸಲಾತಿ ವರ್ಗೀಕರಣ |
|---|---|---|---|---|---|
| 1 | 2 | 3 | 4 | 5 | 6 |
| 07. | ಆಂತರಿಕ ಲೆಕ್ಕ ಪರಿಶೋಧಕರು / ಲೆಕ್ಕಿಗರು ಹಾಗೂ ಖಜಾಂಚಿ **- 02** | ರೂ.17650–450–19000–500–21000–600–24600–700–28800–800–32000 | Must possess a Degree in Commerce or Degree in Business Management awarded by a University Established by law in India. | ಕನಿಷ್ಠ–18<br>ಗರಿಷ್ಠ :–<br>ಸಾ.ಅ.–35<br>ಪ್ರ.2 (ಎ)<br>ಪ್ರ 2 (ಬಿ)<br>ಪ್ರ 3 (ಎ)<br>ಪ್ರ 3 (ಬಿ)<br>- 38<br>ಪ.ಜಾ<br>ಪ.ಪಂ<br>ಪ್ರ–1<br>- 40 | (see table below) |

**6 — ಮೀಸಲಾತಿ ವರ್ಗೀಕರಣ**

| ಮೀಸಲಾತಿ | ಇ. | | ಮ.ಅ. | | ಗ್ರಾ. ಅ. | | ವಿ. ಚೇ. | | ಮಾ. ಸೈ. | | ಕ.ಮಾ.ಅ. | | ಯೋ.ಅ. | | ಒಟ್ಟು | |
|---|---|---|---|---|---|---|---|---|---|---|---|---|---|---|---|---|
| | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ.ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. |
| ಪ.ಜಾ | 01 | – | – | – | – | – | – | – | – | – | – | – | – | – | 01 | – |
| ಪ.ಪಂ. | – | – | – | – | – | – | – | – | – | – | – | – | – | – | – | – |
| ಪ್ರ 1 | – | – | – | – | – | – | – | – | – | – | – | – | – | – | – | – |
| ಪ್ರ 2(ಎ) | – | – | – | – | – | – | – | – | – | – | – | – | – | – | – | – |
| ಪ್ರ 2(ಬಿ) | – | – | – | – | – | – | – | – | – | – | – | – | – | – | – | – |
| ಪ್ರ 3(ಎ) | – | – | – | – | – | – | – | – | – | – | – | – | – | – | – | – |
| ಪ್ರ 3(ಬಿ) | – | – | – | – | – | – | – | – | – | – | – | – | – | – | – | – |
| ಸಾ. ಅ. | 01 | – | – | – | – | – | – | – | – | – | – | – | – | – | 01 | – |
| ಒಟ್ಟು | 02 | – | – | – | – | – | – | – | – | – | – | – | – | – | 02 | – |
| **Grand Total** | | | | | | | | | | | | | | | **02** | |

| ಕ್ರ ಸಂ. | ಹುದ್ದೆಯ ಪದನಾಮ ಮತ್ತು ಸಂಖ್ಯೆ | ವೇತನ ಶ್ರೇಣಿ (2012ನೇ ಪರಿಷ್ಕೃತ) | ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ | ವಯೋಮಿತಿ (ವಯಸ್ಸು ವರ್ಷಗಳಲ್ಲಿ) | ಮೀಸಲಾತಿ ವರ್ಗೀಕರಣ |
|---|---|---|---|---|---|
| 1 | 2 | 3 | 4 | 5 | 6 |
| 08. | ತಾಂತ್ರಿಕ ಸಹಾಯಕರು **- 48** | ರೂ.16000–400–17200–450–19000–500–21000–600–24600–700–28800–800–29600 | Must possess a degree in B.Sc. (Agri.) / B.Sc. (Agri.) in Agricultural Marketing & Co-operation awarded by a University Established by law in India. | ಕನಿಷ್ಠ–18<br>ಗರಿಷ್ಠ :–<br>ಸಾ.ಅ.–35<br>ಪ್ರ.2 (ಎ)<br>ಪ್ರ 2 (ಬಿ)<br>ಪ್ರ 3 (ಎ)<br>ಪ್ರ 3 (ಬಿ)<br>- 38<br>ಪ.ಜಾ<br>ಪ.ಪಂ<br>ಪ್ರ–1<br>- 40 | (see table below) |

| ಮೀಸಲಾತಿ | ಇ. | | ಮ.ಅ. | | ಗ್ರಾ. ಅ. | | ವಿ. ಚೇ. | | ಮಾ. ಸೈ. | | ಕ.ಮಾ.ಅ. | | ಯೋ.ಅ. | | ಒಟ್ಟು | |
|---|---|---|---|---|---|---|---|---|---|---|---|---|---|---|---|---|
| | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. |
| ಪ.ಜಾ | – | 01 | 01 | 01 | 01 | 01 | 01 | – | 01 | – | – | – | – | – | 04 | 03 |
| ಪ.ಪಂ. | – | 01 | 01 | – | – | – | – | – | – | – | – | – | – | – | 01 | 01 |
| ಪ್ರ 1 | – | 01 | – | – | 01 | – | – | – | – | – | – | – | – | – | 01 | 01 |
| ಪ್ರ 2(ಎ) | 01 | 01 | 01 | 01 | 02 | – | – | – | 01 | – | – | – | – | – | 05 | 02 |
| ಪ್ರ 2(ಬಿ) | – | 01 | 01 | – | 01 | – | – | – | – | – | – | – | – | – | 02 | 01 |
| ಪ್ರ 3(ಎ) | – | – | 01 | – | – | – | – | – | – | – | – | – | – | – | 01 | – |
| ಪ್ರ 3(ಬಿ) | – | – | 01 | – | 01 | – | – | – | – | – | – | – | – | – | 02 | – |
| ಸಾ. ಅ. | 03 | 02 | 05 | 03 | 03 | 02 | 01 | 01 | 03 | – | – | – | 01 | – | 16 | 08 |
| ಒಟ್ಟು | 04 | 07 | 11 | 05 | 09 | 03 | 02 | 01 | 05 | – | – | – | 01 | – | 32 | 16 |
| **Grand Total** | | | | | | | | | | | | | | | **48** | |

| ಕ್ರ ಸಂ. | ಹುದ್ದೆಯ ಪದನಾಮ ಮತ್ತು ಸಂಖ್ಯೆ | ವೇತನ ಶ್ರೇಣಿ (2012ನೇ ಪರಿಷ್ಕೃತ) | ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ | ವಯೋಮಿತಿ (ವಯಸ್ಸು ವರ್ಷಗಳಲ್ಲಿ) | ಮೀಸಲಾತಿ ವರ್ಗೀಕರಣ |
|---|---|---|---|---|---|
| 1 | 2 | 3 | 4 | 5 | 6 |
| 09. | ಹಿರಿಯ ಗುಮಾಸ್ತರು / ಸ್ವಾಗತಗಾರರು **- 10** | ರೂ.14550–350–15600–400–17200–450–19000–500–21000–600–24600–700–26700 | Must possess a degree from University Established by law in India with basic course in computer from an institution recognized by Government | ಕನಿಷ್ಠ–18<br>ಗರಿಷ್ಠ :–<br>ಸಾ.ಅ.–35<br>ಪ್ರ.2 (ಎ)<br>ಪ್ರ 2 (ಬಿ)<br>ಪ್ರ 3 (ಎ)<br>ಪ್ರ 3 (ಬಿ)<br>- 38<br>ಪ.ಜಾ<br>ಪ.ಪಂ<br>ಪ್ರ–1<br>- 40 | (see table below) |

| ಮೀಸಲಾತಿ | ಇ. | | ಮ.ಅ. | | ಗ್ರಾ. ಅ. | | ವಿ. ಚೇ. | | ಮಾ. ಸೈ. | | ಕ.ಮಾ.ಅ. | | ಯೋ.ಅ. | | ಒಟ್ಟು | |
|---|---|---|---|---|---|---|---|---|---|---|---|---|---|---|---|---|
| | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ .ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. |
| ಪ.ಜಾ | 01 | 01 | – | – | – | – | – | – | – | – | – | – | – | – | 01 | 01 |
| ಪ.ಪಂ. | 01 | 01 | – | – | – | – | – | – | – | – | – | – | – | – | 01 | 01 |
| ಪ್ರ 1 | 01 | – | – | – | – | – | – | – | – | – | – | – | – | – | 01 | – |
| ಪ್ರ 2(ಎ) | – | – | – | – | – | – | – | – | – | – | – | – | – | – | – | – |
| ಪ್ರ 2(ಬಿ) | – | – | – | – | – | – | – | – | – | – | – | – | – | – | – | – |
| ಪ್ರ 3(ಎ) | – | – | – | – | – | – | – | – | – | – | – | – | – | – | – | – |
| ಪ್ರ 3(ಬಿ) | – | – | – | – | – | – | – | – | – | – | – | – | – | – | – | – |
| ಸಾ. ಅ. | 01 | 01 | 01 | 01 | 01 | – | – | – | – | – | – | – | – | – | 03 | 02 |
| ಒಟ್ಟು | 04 | 03 | 01 | 01 | 01 | – | – | – | – | – | – | – | – | – | 06 | 04 |
| **Grand Total** | | | | | | | | | | | | | | | **10** | |

| ಕ್ರ ಸಂ. | ಹುದ್ದೆಯ ಪದನಾಮ ಮತ್ತು ಸಂಖ್ಯೆ | ವೇತನ ಶ್ರೇಣಿ (2012ನೇ ಪರಿಷ್ಕೃತ) | ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ | ವಯೋಮಿತಿ (ವಯಸ್ಸು ವರ್ಷಗಳಲ್ಲಿ) | ಮೀಸಲಾತಿ ವರ್ಗೀಕರಣ |
|---|---|---|---|---|---|
| 1 | 2 | 3 | 4 | 5 | 6 |
| 10. | ಲೆಕ್ಕಿಗರು **- 11** | ರೂ.14550 –350– 15600– 400– 17200– 450– 19000– 500– 21000– 600– 24600– 700– 26700 | Must be holder of a Degree in Commerce with basic course in Computer obtained from an institution recognized by Government | ಕನಿಷ್ಠ–18<br>ಗರಿಷ್ಠ :–<br>ಸಾ.ಅ.–35<br>ಪ್ರ.2 (ಎ)<br>ಪ್ರ 2 (ಬಿ)<br>ಪ್ರ 3 (ಎ)<br>ಪ್ರ 3 (ಬಿ)<br>- 38<br>ಪ.ಜಾ<br>ಪ.ಪಂ<br>ಪ್ರ–1<br>- 40 | (see table below) |

| ಮೀಸಲಾತಿ | ಇ. ರಾ ವ್ಯ. | ಇ. ಹೈ. ಕ. | ಮ.ಅ. ರಾ ವ್ಯ. | ಮ.ಅ. ಹೈ. ಕ. | ಗ್ರಾ. ಅ. ರಾ ವ್ಯ. | ಗ್ರಾ. ಅ. ಹೈ. ಕ. | ವಿ. ಚೇ. ರಾ ವ್ಯ. | ವಿ. ಚೇ. ಹೈ .ಕ. | ಮಾ. ಸೈ. ರಾ ವ್ಯ. | ಮಾ. ಸೈ. ಹೈ. ಕ. | ಕ.ಮಾ.ಅ. ರಾ ವ್ಯ. | ಕ.ಮಾ.ಅ. ಹೈ. ಕ. | ಯೋ.ಅ. ರಾ ವ್ಯ. | ಯೋ.ಅ. ಹೈ. ಕ. | ಒಟ್ಟು ರಾ ವ್ಯ. | ಒಟ್ಟು ಹೈ. ಕ. |
|---|---|---|---|---|---|---|---|---|---|---|---|---|---|---|---|---|
| ಪ.ಜಾ | 01 | 01 | 01 | – | – | – | – | – | – | – | – | – | – | – | 02 | 01 |
| ಪ.ಪಂ. | 01 | – | – | – | – | – | – | – | – | – | – | – | – | – | 01 | – |
| ಪ್ರ 1 | 01 | – | – | – | – | – | – | – | – | – | – | – | – | – | 01 | – |
| ಪ್ರ 2(ಎ) | 01 | – | – | – | – | – | – | – | – | – | – | – | – | – | 01 | – |
| ಪ್ರ 2(ಬಿ) | – | – | – | – | – | – | – | – | – | – | – | – | – | – | – | – |
| ಪ್ರ 3(ಎ) | – | – | – | – | – | – | – | – | – | – | – | – | – | – | – | – |
| ಪ್ರ 3(ಬಿ) | – | – | – | – | – | – | – | – | – | – | – | – | – | – | – | – |
| ಸಾ. ಅ. | 01 | – | 02 | – | 01 | – | 01 | – | – | – | – | – | – | – | 05 | – |
| ಒಟ್ಟು | 05 | 01 | 03 | – | 01 | – | 01 | – | – | – | – | – | – | – | 10 | 01 |
| **Grand Total** | | | | | | | | | | | | | | | **11** | |

| ಕ್ರ ಸಂ. | ಹುದ್ದೆಯ ಪದನಾಮ ಮತ್ತು ಸಂಖ್ಯೆ | ವೇತನ ಶ್ರೇಣಿ (2012ನೇ ಪರಿಷ್ಕೃತ) | ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ | ವಯೋಮಿತಿ (ವಯಸ್ಸು ವರ್ಷಗಳಲ್ಲಿ) | ಮೀಸಲಾತಿ ವರ್ಗೀಕರಣ |
|---|---|---|---|---|---|
| 1 | 2 | 3 | 4 | 5 | 6 |
| 11. | ಚಾಲಕರು **- 03** | ರೂ.11600 –200– 12000– 250– 13000– 300– 14200– 350– 15600– 400– 17200– 450– 19000– 500– 21000 | Must have passed S.S.L.C and must be holder of a current valid Driving License to drive a light motor vehicle with Three years driving experience in an organization recognized by Government | ಕನಿಷ್ಠ–18<br>ಗರಿಷ್ಠ :–<br>ಸಾ.ಅ.–35<br>ಪ್ರ.2 (ಎ)<br>ಪ್ರ 2 (ಬಿ)<br>ಪ್ರ 3 (ಎ)<br>ಪ್ರ 3 (ಬಿ)<br>–38<br>ಪ.ಜಾ<br>ಪ.ಪಂ<br>ಪ್ರ–1<br>–40 | (see table below) |

| ಮೀಸಲಾತಿ | ಇ. | | ಮ.ಅ. | | ಗ್ರಾ. ಅ. | | ವಿ. ಚೇ. | | ಮಾ. ಸೈ. | | ಕ.ಮಾ.ಅ. | | ಯೋ.ಅ. | | ಒಟ್ಟು | |
|---|---|---|---|---|---|---|---|---|---|---|---|---|---|---|---|---|
| | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ .ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. | ರಾ ವೃ. | ಹೈ. ಕ. |
| ಪ.ಜಾ | 01 | 01 | – | – | – | – | – | – | – | – | – | – | – | – | 01 | – |
| ಪ.ಪಂ. | – | – | – | – | – | – | – | – | – | – | – | – | – | – | – | – |
| ಪ್ರ 1 | – | – | – | – | – | – | – | – | – | – | – | – | – | – | – | – |
| ಪ್ರ 2(ಎ) | – | – | – | – | – | – | – | – | – | – | – | – | – | – | – | – |
| ಪ್ರ 2(ಬಿ) | – | – | – | – | – | – | – | – | – | – | – | – | – | – | – | – |
| ಪ್ರ 3(ಎ) | – | – | – | – | – | – | – | – | – | – | – | – | – | – | – | – |
| ಪ್ರ 3(ಬಿ) | – | – | – | – | – | – | – | – | – | – | – | – | – | – | – | – |
| ಸಾ. ಅ. | 01 | – | – | – | – | – | – | – | – | – | – | – | – | – | 01 | – |
| ಒಟ್ಟು | 02 | 01 | – | – | – | – | – | – | – | – | – | – | – | – | 02 | 01 |
| **Grand Total** | | | | | | | | | | | | | | | **03** | |

**ಸಂಕ್ಷೇಪ:**– ಇ.–ಇತರೆ / ಮ.ಅ.–ಮಹಿಳಾ ಅಭ್ಯರ್ಥಿ / ಗ್ರಾ.ಅ.–ಗ್ರಾಮೀಣ ಅಭ್ಯರ್ಥಿ / ವಿ.ಚೇ.–ವಿಶೇಷಚೇತನ / ಮಾ.ಸೈ.–ಮಾಜಿಸೈನಿಕ / ಕ.ಮಾ.ಅ.–ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ / ಯೋ.ಅ.–ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ / ಪ.ಜಾ–ಪರಿಶಿಷ್ಟ ಜಾತಿ / ಪ.ಪಂ.– ಪರಿಶಿಷ್ಟ ಪಂಗಡ / ಪ್ರ–ಪ್ರವರ್ಗ / ಸಾ.ಅ.–ಸಾಮಾನ್ಯ ಅಭ್ಯರ್ಥಿ / ರಾ.ವೃ–ರಾಜ್ಯ ವೃಂದ / ಹೈ.ಕ.–ಹೈದರಾಬಾದ್ ಕರ್ನಾಟಕ.

ಸಹಿ/-

ವ್ಯವಸ್ಥಾಪಕ ನಿರ್ದೇಶಕರು